ಕೋಟಿರೂಯನ್ನು ಬಿಡುಗಡೆ ಮಾಡಲು ಮುಂದೆ ಬಂದು ಮೊದಲನೆಯ ಕಂತಾಗಿ, ಈ ತಿಂಗಳು 1.25 ಕೋಟಿ ರೂ.ಗಳನ್ನು ಯುಗಾದಿಯ ಕೊಡುಗೆಯಾಗಿ ನಮ್ಮ ಸರ್ಕಾರ ನೇಕಾರರಿಗೆ ಬಿಡುಗೆಡೆ ಮಾಡುತ್ತದೆ. ಆ ಒಂದು ದೃಷ್ಟಿಯಲ್ಲಿ ಆ ಹಣ ಕ್ಯಾಪಿಟಲ್ ಆಗಿ ಕೊಡುವಂಥಾಗಿ ಆ ನೇಕಾರರ ಸಂಕಷ್ಟಕ್ಕೆ ನಾವು ಸ್ಪಂದಿಸುತ್ತಿದ್ದೇವೆ ಎನ್ನತಕ್ಕಂಥದ್ದನ್ನು ಈ ಸದನದ ಮೂಲಕ ಆ ನೇಕಾರರಿಗೆ ತಿಳಿಸುತ್ತಾ ಎರಡನೆಯದಾಗಿ, ಮಾನ್ಯ ಜಗದೀಶ್ ಶೆಟ್ಟರು ಹುಬ್ಬಳ್ಳಿಯಲ್ಲಿ ನಡೆದಿರುವ ಸಮಾವೇಶಕ್ಕೆ ನಾನು ಬರಲಿಲ್ಲವೆಂದು ಹೇಳಿದರು. ನಮ್ಮಲ್ಲಿ ಒಂದು ಪರಿಪಾಠವಿದೆ. ಇನ್‌ವಿಟೇಶನ್‌ಗೆ ಹೆಸರು ಹಾಕಿ ನಂತರ ಕರೆಯುತಕ್ಕಂಥದ್ದು, ಅದೊಂದು ತೊಡಕಾಗಿತ್ತು, ಆದ್ದರಿಂದ ತಾವೂ ಕೂಡ ಹಿರಿಯ ರಾಜಕಾರಣಿಗಳು. ನನ್ನ ಮಾತಿನಲ್ಲಿ ಸತ್ಯವಿದೆ, ಅದಕ್ಕಾಗಿ ಅವತ್ತು ನಾನು ಹೋಗುವುದಕ್ಕಾಗಲಿಲ್ಲ. ನನ್ನನ್ನು ಯಾವುದೇ ಕಾರ್ಯಕ್ರಮಕ್ಕೆ ಕರೆದರೂ ಕೂಡ ಕಷ್ಟ ಇದ್ದರೂ ಹೋಗಿ ಪರಿಹಾರವನ್ನು ಮಾಡತಕ್ಕಂಥ ಧೈರ್ಯ ನನ್ನಲ್ಲಿದೆ, ನಾನು ಬರುತ್ತಿದ್ದೆ ಆದರೆ ಅವರು ನನಗೆ ಸರಿಯಾಗಿ ತಿಳುವಿಳಿಕೆ ಕೊಡದೆ ತಪ್ಪಾಗಿತ್ತು, ಆದರೂ ಕೂಡ ಅವರ ಬೇಡಿಕೆಗಳು ಏನಿವೆ, ಅದನ್ನು ನಾನು ಬಗೆಹರಿಸುವುದಕ್ಕೆ ನಮ್ಮ ಸರ್ಕಾರ ಪ್ರಯತ್ನವನ್ನು ಮಾಡುತ್ತದೆ ಎನ್ನತಕ್ಕಂಥದ್ದನ್ನು ಹೇಳಿ, ಅವರಿಗೆ ಉದ್ಭವವಾಗಿರುವ ಸಂಕಷ್ಟಕ್ಕೆ ನಾವು ಸ್ಪಂದಿಸಿದ್ದೇವೆ. ಪ್ರಥಮವಾಗಿ 8 ಕೋಟಿ ರೂ.ಗಳನ್ನು ವಿದ್ಯಾವಿಕಾಸ ಯೋಜನೆ ಅಡಿಯಲ್ಲಿ ರಿಬೇಟ್‌ಗಾಗಿ 1.25 ಕೋಟಿ ರೂ.ಗಳನ್ನು ಕೇಂದ್ರ ಸರ್ಕಾರದಿಂದ ಬಂದಿದೆ, ನಮ್ಮ 10 ಪರ್ಸೆಂಟ್‌ನ್ನು ನಾವು ಕೊಡುತ್ತಿದ್ದೇವೆ. ಎರಡನೆಯ ಕಂತನ್ನು ಎಪ್ರಿಲ್ ತಿಂಗಳಲ್ಲಿ 12 ಕೋಟಿ ರೂ.ಗಳನ್ನು ವಿದ್ಯಾವಿಕಾಸ ಯೋಜನೆಯಲ್ಲಿ, ಉಳಿದದ್ದನ್ನು ನಾವು ಬಿಡುಗಡೆ ಮಾಡುತ್ತೇವೆ ಎನ್ನತಕ್ಕಂಥದ್ದನ್ನು ಸದನದಮೂಲಕ ನಾನು ನೇಕಾರ ಬಂಧುಗಳಿಗೆ ಹೂಡಿರುವ ಮುಷ್ಕರವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ನಾನು ಕಳಕಳಿಯಿಂದ ಮನವಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಡಿ.ಆರ್. ಪಾಟೀಲ್:ಸರ್, ತಾವು ಈಗ ಬಹಳ ಖುಷಿ ತರುವಂಥ ಮಾತನ್ನು ಹೇಳಿದಿರಿ, ಈ ತಿಂಗಳು ಎಂದು ತಾವು ಹೇಳಿದಿರಿ, ಅದರ ಬದಲಾಗಿ ಈ ವಾರ ಎಂದು ಹೇಳಿದರೆ ಇನ್ನು ಹೆಚ್ಚು ಅವರಿಗೆ ಖುಷಿಯಾಗುತ್ತದೆ.

ಶ್ರೀ ಎಸ್.ಜಿ. ನಂಜಯ್ಯನಮಠ : ಏಕೆಂದರೆ ಯುಗಾದಿಗೆ ಆ ಮಾಲನ್ನು ಮಾರಾಟ ಮಾಡಬೇಕಾದರೆ ನಾವು ಈ ವಾರದಲ್ಲಿರಿಬೇಟ್‌ನ್ನು ಕೊಟ್ಟರೆ, ಈ ಅನುಕೂಲತೆಯನ್ನು ನಾವು ಅವರಿಗೆ ಕೊಟ್ಟರೆ ಆಗ ಮಾರಾಟ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಈ ವಾರ ಮಾಡಬೇಕು.

ಶ್ರೀ ಯು.ಆರ್. ಸಭಾಪತಿ: ನಾಳೆಯೇ ನಾವು ಸಹಕಾರ ಸಂಘಗಳಲ್ಲಿ ಬೋರ್ಡ್‌ನ್ನು ಹಾಕಿಸುತ್ತೇವೆ.

ಶ್ರೀ ಹೆಚ್.ಎಂ. ರೇವಣ್ಣ (ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು): ಕೊಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆ.

(ಆ) ವಿಷಯ: ಮಂಗಳೂರು ಮಾಹಾನಗರ ಪಾಲಿಕೆ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ

ಶ್ರೀ ಎನ್. ಯೋಗೀಶ್ ಭಟ್(ಮಂಗಳೂರು) : ಮಾನ್ಯ ಉಪಾಧ್ಯಕ್ಷರೆ, ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಕುಡಿಯುವ ನೀರಿನ ಹಾಹಾಕಾರ ಉಂಟಾಗಿದೆ. ಬಂದಿರುವಂಥ

ಸಮಸ್ಯೆ ನಮ್ಮ ಜಿಲ್ಲೆಗೆ ಬರದ ಯಾವುದೇ ಛಾಯೆ ಇಲ್ಲ. ಬರದ ಬಡಿತ ಕೂಡ ಆಗಿರುವುದಿಲ್ಲ. ಧಾರಕಾರವಾಗಿ ಮಳೆ ಬಂದಿದೆ. ನದಿಯಲ್ಲಿ ನೀರೂ ಕೂಡ ಇದೆ. ನಮ್ಮಲ್ಲಿ ಪಂಪಿಂಗ್ ಸ್ಟೇಶನ್‌ಗಳು ಇವೆ. ಆ ಪಂಪಿಂಗ್ ಸ್ಟೇಶನ್‌ಗಳಿಗೆ ಸರಿಯಾಗಿ ವಿದ್ಯುತ್ ಪೂರೈಕೆಯಾಗುತ್ತಿಲ್ಲ. ಇಡೀ ಮಹಾನಗರ ಪಾಲಿಕೆಯಲ್ಲಿ ಇರುವಂಥ ಕಟ್ಟಡಗಳಿಗೆ ಈ ಮಂಡಲಿಯಿಂದಲೇ ನೀರು ಒದಗಬೇಕಾಗಿದೆ. ಪಂಪಿಂಗ್ ಸ್ಟೇಶನ್‌ಗಳಲ್ಲಿ ವಿದ್ಯುತ್ ಸರಬರಾಜು ಆಗದಿರುವುದರಿಂದ ಸರಿಯಾಗಿ ಪಂಪಿಂಗ್ ಆಗದೆ ಇಂತಹ ಒಂದು ಸಮಸ್ಯೆ ಉದ್ಭವವಾಗಿದೆ. ಅನೇಕ ಕಡೆಗಳಲ್ಲಿ ಈ ಒಂದು ಕಾರಣದಿಂದ ಕೆಲವು ಕಡೆ ವಾರಗಟ್ಟಲೇ ನೀರು ಇಲ್ಲ. ನೀರು ಇದ್ದೂ ಇಲ್ಲದಂಥ ಸ್ಥಿತಿ ನಮ್ಮಲ್ಲಿ ಬಂದಿದೆ. ಟ್ಯಾಪ್‌ನ್ನು ಆನ್ ಮಾಡಿದರೆ ಕೇವಲ ಗಾಳಿ ಶಬ್ದ ಮಾತ್ರ ನಾವು ಕೇಳುವಂಥದ್ದು, ಅನೇಕ ಸಂದರ್ಭಗಳಲ್ಲಿ ಹೆಣ್ಣುಮಕ್ಕಳು ಪಾಪಕಾದುಕಾದು ಇವತ್ತು ಸಾಯಂಕಾಲ ಬರುತ್ತದೆ, ನಾಳೆ ಬರುತ್ತದೆಂದು ಹೇಳಿ, ಕಣ್ಣೀರು ಹಾಕುವಂಥದ್ದು ಮಾತ್ರ ನಮಗೆ ಲಭ್ಯವಾಗಿದೆ ವಿನಹಃ ನೀರು ಬರಲಿಕ್ಕೆ ಸಾಧ್ಯವಾಗುತ್ತಿಲ್ಲ. ಬಹುಶಃ ಈ ಸಂದರ್ಭದಲ್ಲಿ ಮೆಸ್ಕಾಂಸಂಸ್ಥೆ ಸರಕಾರ ಸ್ಪಷ್ಟವಾದ ಆದೇಶ ಇದ್ದರೂಕೂಡ ನಿರಂತರವಾಗಿ ಕುಡಿಯುವ ನೀರಿನ ಪಂಪಿಂಗ್ ಸ್ಟೇಶನ್‌ಗಳಲ್ಲಿ, ನಿರಂತರವಾಗಿ ವಿದ್ಯುತ್ ಸರಬರಾಜು ಮಾಡಬೇಕು ಎನ್ನುವ ಆದೇಶವಿದ್ದರೂ ಕೂಡ, ಅದು ತನ್ನ ಕರ್ತವ್ಯ ಮಾಡುವುದರಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎನ್ನುವಂಥದ್ದನ್ನು ಈ ಮೂಲಕ ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತಿದ್ದೇನೆ. ಒಂದೇ ವೇಳೆ ಯಾವುದೇ ಕಾರಣಕ್ಕೆ ಮೆಸ್ಕಾಮ್ ಸಂಸ್ಥೆಗೆ ವಿದ್ಯುತ್‌ನ್ನು ಸರಬರಾಜು ಮಾಡುವುದಕ್ಕೆ ಅಸಾಧ್ಯವೆಂತಿದ್ದರೆ ನಮಗೆ ಜನರೇಟರ್‌ನ ಆಲ್ಟರ್‌ನೇಟೀವ್ ವ್ಯವಸ್ಥೆಯನ್ನಾದರೂ ಮಾಡಿಕೊಡುವ ಬಗ್ಗೆ ಸರ್ಕಾರದಿಂದ ತಕ್ಷಣ ಸಮರೋಪಾದಿಯಲ್ಲಿ ಈ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಈ ಹಿನ್ನೆಲೆಯಲ್ಲಿಯೂ ಕೂಡ ತಾವೂ ಪರಿಶೀಲನೆ ಮಾಡಿಕೊಂಡು ನಮಗೆ ಒಂದು ವ್ಯವಸ್ಥೆಯನ್ನು ಒದಗಿಸಿಕೊಡಬೇಕೆಂಬ ಕಳಕಳಿಯನ್ನು ವಿನಂತಿಯನ್ನು ನಾನು ಮಾಡುತ್ತಿದ್ದೇನೆ. ಇನ್ನೊಂದು ಕಡೆಯಲ್ಲಿ ಒಳಚರಂಡಿ ಯೋಜನೆಯ ದುಸ್ಥಿತಿಯಿಂದಾಗಿ ಇರುವಂತಹ ಬಾವಿಗಳು ಕೂಡ ಹಾಳಾಗಿವೆ. ಎಲ್ಲಾ ಕಡೆಗಳಲ್ಲೂ ಈ ಒಂದು ಸೀವರೇಜ್ ವಾಟರ್ ಸೀಪೇಜ್‌ನಿಂದ ಕುಡಿಯುವ ನೀರು ಕೂಡ ಇರುವಂತಹ ಸೋರ್ಸ್‌ಸ್ ಎಲ್ಲಿದೆ ಆ ಬಾವಿಗಳು ಕೂಡ ಹಾಳಾಗಿದೆ. ನಮ್ಮ ಮಹಾನಗರಪಾಲಿಕೆಯ ನೀರು ವಿತರಣಾ ವ್ಯವಸ್ಥೆಯಲ್ಲಿಯೂ ನಾವು ಇವತ್ತು ಅವಲಂಬಿತವಾಗಿರುವುದರಿಂದ ಇಂತಹ ಒಂದು ಕಾರಣಕ್ಕೋಸ್ಕರ ಪಂಪಿಂಗ್ ವ್ಯವಸ್ಥೆಯನ್ನು ಸುಧಾರಿಸುವಂಥ ದೃಷ್ಟಿಯಲ್ಲಿ ತಕ್ಷಣ ಇದರ ಬಗ್ಗೆ ಹೆಚ್ಚಿನ ಕಾಳಜಿಯನ್ನು ವಹಿಸಬೇಕು ಮತ್ತು ನಿರಂತರ ವಿದ್ಯುತ್ ಸರಬರಾಜು ಮಾಡುವಂತಹ ನಿಟ್ಟಿನಲ್ಲಿ ತಾವೂ ಸೂಕ್ತವಾದಂತಹ ಆದೇಶವನ್ನು ಕೊಡಬೇಕು. ಮತ್ತು ಅದರ ಜೊತೆಯಲ್ಲಿ ಪರ್ಯಾಯ ವ್ಯವಸ್ಥೆಗೋಸ್ಕರ ಅದಕ್ಕೆ ಬೇಕಾದಂತಹ ಆಲ್ಟರ್‌ನೇಟೀವ್ ಜನರೇಟರ್ ಸಿಸ್ಟಮ್ ಕೂಡ ವ್ಯವಸ್ಥೆ ಮಾಡುವಂತಹ ರೀತಿಯಲ್ಲಿ ಅದಕ್ಕೆ ಆರ್ಥಿಕ ಅನುದಾನವನ್ನೂ ಕೂಡ ಬಿಡುಗಡೆ ಮಾಡಬೇಕೆಂದು ವಿನಂತಿಯನ್ನು ಕೂಡ ಈ ಸಂದರ್ಭದಲ್ಲಿ ತಮ್ಮ ಮೂಲಕ ನಾನು ಮಾಡಲಿಚ್ಚಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಅದರ ಬಗ್ಗೆ ಸಂಬಂಧಪಟ್ಟ ಮಂತ್ರಿಗಳಿಗೆ ಸೂಚನೆಯನ್ನು ಕಳುಹಿಸಿಕೊಡುತ್ತೇನೆ. ನನಗೆ ಏನು ಅದರ ಬಗ್ಗೆ ಮಾಹಿತಿ ಇಲ್ಲ.

ಶ್ರೀ ಎನ್. ಯೋಗೀಶ್ ಭಟ್ : ಆರಂಭದ ದಿವಸದಲ್ಲಿ ಇಷ್ಟಿದ್ದರೂ ಕೂಡ ನಮಗೆ ಯಾವುದೇ ಪರಿಹಾರ ಕಾಣದೆ ಇರುವುದರಿಂದ ನಾನು ತಮ್ಮ ಮೂಲಕ ವಿನಂತಿಸಿಕೊಳ್ಳುತ್ತಿದ್ದೇನೆ. ಮಾಹಿತಿ ತಂತ್ರಜ್ಞಾನ ಯುಗದಲ್ಲಿಯೂ ಕೂಡ ಈ ಒಂದು ರೀತಿಯಲ್ಲಿ ಹೇಳುವಂತಹದ್ದು ನಿಜವಾಗಿಯೂ ಹಾಸ್ಯಸ್ಪದವಾಗಿದೆ.

ಉಪಾಧ್ಯಕ್ಷರು : ನಾಳೆ ದಿವಸ ಸಂಬಂಧಪಟ್ಟ ಮಂತ್ರಿಗಳು ಇದರ ಬಗ್ಗೆ ಉತ್ತರವನ್ನು ಕೊಡುತ್ತಾರೆ. ನಿನ್ನೆ ದಿವಸ ಕರ್ನಾಟಕ ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2002ನೇ ಸಾಲಿನ ಕರ್ನಾಟಕ ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ವಿಧೇಯಕದ ಬಗ್ಗೆ.

9. ಶಾಸನ ರಚನೆ

ಅ) ವಿಷಯ: ಕರ್ನಾಟಕ ನಿರಸನಗೊಳಿರುವ ಮತ್ತು ತಿದ್ದುಪಡಿ ಮಾಡುವ ವಿಧೇಯಕ 2003

+ ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ನಿರಸನಗೊಳಿಸುವ ತಿದ್ದುಪಡಿ ವಿಧೇಯಕ 2002ನ್ನು ನಾನು ಆಗಲೇ ಮಂಡನೆ ಮಾಡಿದ್ದೇನೆ. ಇದರ ಬಗ್ಗೆ ಆಗಲೇ ಚರ್ಚೆ ಮಾಡಿದ್ದೇವೆ. ತಮಗೆ ಬೇಕಾಗಿರುವಂತಹ ಮಾಹಿತಿಯನ್ನು ಕೊಡುವುದಕ್ಕೆ ಕೊಡುತ್ತೇನೆಂದು ಹೇಳಿದ್ದೆ. ಇದರಲ್ಲಿ 9 ವ್ಯಾಲ್ಯೂಂಗಳು ಇವೆ. ಅದಕ್ಕಾಗಿ ಲೈಬ್ರರಿಯಲ್ಲಿ ಲಿಟ್ಟಿದ್ದೇನೆ. ಅವರಿಗೆ ಬೇಕಾದರೆ 9 ವ್ಯಾಲ್ಯೂಂಗಳನ್ನು ಕಳುಹಿಸಿಕೊಡುತ್ತೇನೆ, ಬೇಕಾದರೆ ಲೈಬ್ರರಿಯಲ್ಲಿ ನೋಡಬಹುದು. ಅದರ ಬಗ್ಗೆ ಒಂದು ಲಿಸ್ಟ್‌ನ್ನು ತಯಾರು ಮಾಡಿಸಿದ್ದೇನೆ. ಆ ಜಿಸ್ಟ್‌ನ್ನು ನಾನು ತಮಗೆ ಕೊಡುತ್ತೇನೆ. ಇದರ ಬಗ್ಗೆ ಸುಪ್ರಿಂಕೋರ್ಟಿನವರು ಒಂದು ಒಳ್ಳೆಯ ಮಾತನ್ನು ಹೇಳಿದ್ದಾರೆ, Repealing Legislative scavenging ಅಂತ ಶಾಸಕಾಂಗ ಕಸ ಗುಡಿಸುವಂತಹ ಕೆಲಸ ಅಂತ ಕನ್ನಡದಲ್ಲಿ ನಾವು ಹೇಳಬಹುದು. ಆದ್ದರಿಂದ ಪ್ರತಿಯೊಂದು ಶಾಸನವನ್ನು ಹೇಗೆ ನಾವು ಅದನ್ನು ನಿರಸನಗೊಳಿಸಬೇಕು, ಏಕೆ ಗೊಳಿಸಬೇಕು, ಇದು ಪ್ರತಿ ವರ್ಷ ನಡೆಯುವಂತಹ ಕಾರ್ಯವಾಗಿದೆ. ಇದು ಸಂಸತ್ತಿನಲ್ಲಿಯೂ ಕೂಡ ನಡೆಯುತ್ತದೆ. ಶಾಸಕಾಂಗದಲ್ಲೂ ಕೂಡ ನಡೆಯುತ್ತದೆ. ನಾವು ಇಲ್ಲಿ ತಂದಿರತಕ್ಕಂತಹ 130 ಶಾಸನಗಳಲ್ಲಿ ಸುಮಾರು 130 ರಲ್ಲಿ 109, ಈ ಅಮೆಂಡ್‌ಮೆಂಟ್‌ಗಳನ್ನು ತರುತ್ತೇವೆ ಈ ಶಾಸನಗಳಲ್ಲಿ. ಈ ಅಮೆಂಟ್‌ಮೆಂಟ್ ಬಂದಾಗ ಒರಿಜಿನಲ್ ಲಾ ಜೊತೆಗೆ ಅದು ಸೇರಿಕೊಂಡು ಬಿಡುತ್ತದೆ. As amended ಅಂತ ಒರಿಜಿನಲ್ ಆಕ್ಟ್‌ಗೆ ಸೇರಿಕೊಳ್ಳುತ್ತದೆ. ಆದ್ದರಿಂದ ಈ ಅಮೆಂಡೆಡ್ ಆಕ್ಟ್ ಏನು ಉಳಿಯುತ್ತದೆ ಅದು ಉಪಯುಕ್ತಕ್ಕೆ ಬರುವುದಿಲ್ಲ. Because the amendement becomes the part and parcel of the original Bill. Therefore, ಇದು ಪ್ರಯೋಜನವಿಲ್ಲವೆನ್ನುವ ಕಾರಣಕ್ಕಾಗಿ ಇದನ್ನು ನಾವು ನಿರಸನಗೊಳಿಸುತ್ತೇವೆ. ಎರಡನೆಯದು ಸುಮಾರು 21 ಒರಿಜಿನಲ್ ಆಕ್ಟ್ಸ್ ಇದೆ, ಅದರಲ್ಲಿ 84,85,97,98,107,108,120 ಮತ್ತು 127 ಇದು ಅಪ್ರೋಪ್ರಿಯೇಷನ್ ಆಕ್ಟ್ಸ್ ಪ್ರತಿ ವರ್ಷ ನಮ್ಮ ಬಜೆಟ್ ಪಾಸಾದ ಮೇಲೆ ಅಪ್ರೋಪ್ರಿಯೆಷನ್ ಬಿಲ್ ಎಂದು ಬರುತ್ತದೆ. ರೆವಿನ್ಯೂ Assests, receipts and expenditure ಆದ ಮೇಲೆ ಆ ಅಪ್ರೋಪ್ರಿಯೇಷನ್ ಬಿಲ್ ಪಾಸಾಗುವುದಷ್ಟೇ ಕೆಲಸ, ಅದು ಆ ವರ್ಷಕ್ಕೆ ಮುಗಿದು ಹೋಗಿ ಬಿಡುತ್ತದೆ. ಅವುಗಳನ್ನು